# 1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
## ಬೆಂಗಳೂರು ನಗರ

ಸಿ.ಸಿ. ನಂ. 17018-2023

ಸಿಡಬ್ಲ್ಯೂ -4 ಪಿಡಬ್ಲ್ಯೂ-4

ಸಾಕ್ಷಿದಾರರ ಹೆಸರು : ರಾಘವ
ತಂದೆಯ ಹೆಸರು : ಗೋಪಾಲ
ವಯಸ್ಸು : 33 ವರ್ಷ
ಕೆಲಸ : ಕೂಲಿ ಕೆಲಸ
ವಾಸ : ನಂಜರಾಯನಪಟ್ಟಣ, ಕೊಡಗು

ಸಾಕ್ಷಿಯನ್ನು ದಿನಾಂಕಃ 21-02-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನನಗೆ ಚಾಸಾ 3 ರವರು ಮತ್ತು 2 ನೇ ಆರೋಪಿ ಗೊತ್ತು. ಸಾಕ್ಷಿಗೆ ನಿಪಿ.6ರ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ.6ಬಿ ಎಂದು ಗುರುತಿಸಲಾಯಿತು.

ಈಗ್ಗೆ ಒಂದುವರೆ ವರ್ಷಗಳ ಹಿಂದೆ 2 ನೇ ಆರೋಪಿಯ ಮನೆಯ ಬಳಿ ನಾನು ಹೋಗುತ್ತಿರುವಾಗ ಅಲ್ಲಿ ಜನ ಸೇರಿದ್ದರು. ಆ ಸಮಯದಲ್ಲಿ ಅಲ್ಲಿ ಇದ್ದ ಪೋಲೀಸರು ನನ್ನನ್ನು ಕರೆದು ಒಂದು ಪೋಟೋವನ್ನು ತೆಗೆದುಕೊಂಡು ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅದನ್ನು ನಿಪಿ.14 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವ ಕಾರಣಕ್ಕಾಗಿ ಪಡೆದುಕೊಂಡರು ಮತ್ತು ಭಾವಚಿತ್ರವನ್ನು ತೆಗೆದುಕೊಂಡರು ಎಂದು ಗೊತ್ತಿಲ್ಲ. ನಿಪಿ.14 ರಲ್ಲಿ ಮರದ ತುಂಡುಗಳು ಕಾಣುತ್ತಿರುತ್ತವೆ. ನನ್ನ ಜೊತೆ ಚಾಸಾ 3 ರವರು ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ

ಸಾಕ್ಷಿಗೆ ಮು.ಮಾ 4 ಮತ್ತು 5 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಅವು ಆನೆಯ ದಂತ ಇರುತ್ತವೆ ಎಂದು ನುಡಿಯುತ್ತಾರೆ. ನಿಪಿ.14 ರಲ್ಲಿ ಕಾಣುವ ವಸ್ತುಗಳು ಮರದ ತುಂಡುಗಳಲ್ಲ ಅವು ಆನೆಯ ದಂತಗಳು ಎಂದರೆ ಸರಿ. ಸದರಿ ಮುದ್ದೆ ಮಾಲು 4 ಮತ್ತು 5 ನ್ನು ವಶಪಡಿಸಿಕೊಂಡ ಕಾಲಕ್ಕೆ ನನ್ನಿಂದ ನಿಪಿ.6 ರ ಪಂಚನಾಮೆಗೆ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ</u>

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ